# ಶ್ರೀಮಾತೆಯವರೊಡನೆ ಮಾತುಕತೆ

## ಸರಯೂ ಬಾಲಾ ದೇವಿ ಅವರ ನೆನಪುಗಳು



### ಫೆಬ್ರವರಿ ೧೯೧೮

ಶ್ರೀಮಾತೆ ಹೇಳುತ್ತಿದ್ದಾರೆ, "ದಕ್ಷಿಣೇಶ್ವರದಲ್ಲಿದ್ದಾಗ ಒಂದು ದಿನ ಜಾಜಿ ಮತ್ತು ಮಲ್ಲಿಗೆ ಹೂವುಗಳಿಂದ ಏಳು ಸುತ್ತಿನ ಮಾಲೆ ಮಾಡಿದ್ದೆ. ಸಂಜೆ ಹಾರವನ್ನು ಹೆಣೆದು ಕಲ್ಲಿನಪಾತ್ರೆಯಲ್ಲಿ ನೆನೆಯಿಸಿಟ್ಟಿದ್ದೆ. ಬಹಳ ಚೆನ್ನಾಗಿ ಅರಳಿತು. ದೇವಿ ಕಾಳಿಗೆ ಹಾಕಲು ಕಳುಹಿಸಿದೆ. ಅಲಂಕಾರಗಳನ್ನೆಲ್ಲಾ ತೆಗೆದು ಬರಿಯ ಈ ಹಾರದಿಂದ ಆಕೆಯನ್ನು ಅಲಂಕರಿಸಲಾಗಿತ್ತು. ಅಷ್ಟರಲ್ಲಿ ಠಾಕೂರ್ ಅಲ್ಲಿಗೆ ಹೋದರು. ಅದನ್ನು ನೋಡಿ ಭಾವಾವಿಷ್ಟರಾದರು! ಮತ್ತೆ ಮತ್ತೆ, "ಆಹಾ! ಕರಿಯ ಬಣ್ಣದ ಹಿನ್ನೆಲೆಯಲ್ಲಿ ಎಷ್ಟು ಸುಂದರವಾಗಿದೆ ಈ ಹಾರ. ಯಾರು ಇದನ್ನು ಹೆಣೆದರು?" ಎಂದು ವಿಚಾರಿಸಿದರು. ನನ್ನ ಹೆಸರು ಹೇಳಿದಾಗ, "ಓ, ಆಕೆಯನ್ನು ಕರೆದು ತಾ. ಅವಳು ನೋಡಲಿ, ಹಾರದಿಂದ ಮಾತೆಯ ರೂಪ ಹೇಗೆ ಹೆಚ್ಚಾಗಿದೆ ಎಂದು" ಎಂದರು. ವೃದ್ಧೆಯಾದ ಬೃಂದೆ ಬಂದು ನನ್ನನ್ನು ಕರೆದಳು. ದೇವಸ್ಥಾನದ ಬಳಿ ಬಂದು ನೋಡಿದರೆ, ಬಲರಾಮ ಬಾಬು, ಸುರೇನ್ ಬಾಬು, ಮತ್ತಿತರರು ಕಾಳಿಯ ದೇವಸ್ಥಾನದೆಡೆ ಬರುತ್ತಿದ್ದಾರೆ! ನಾನೆಲ್ಲಿ ಅಡಗಿಕೊಳ್ಳಲಿ? ಬೃಂದೆಯ ಸೆರಗಿನ ಮರೆಯಲ್ಲಿ ದೇವಸ್ಥಾನದ ಹಿಂದಿರುವ ಮೆಟ್ಟಿಲಿನಿಂದ ಹೋಗಲು ಆರಂಭಿಸಿದೆ. ಠಾಕೂರ್ ಅದನ್ನು ತಿಳಿದು, ಜೋರಾಗಿ ಹೇಳಿದರು, "ಓ, ಆ ಕಡೆ ಹೋಗಬೇಡ, ಆ ಹೊತ್ತು ಒಬ್ಬಾಕೆ (ಮೀನು ಮಾರುವವಳು) ಆ ಮೆಟ್ಟಿಲುಗಳನ್ನು ಹತ್ತಲು ಹೋಗಿ ಜಾರಿ ಬಿದ್ದಳು. ಕಾಲು ಮುರಿದು ಸತ್ತಳು. ಮುಂದಿನಿಂದಲೇ ಬಾ." ಅವರ ಈ ಮಾತುಗಳನ್ನು ಕೇಳಿ ಬಲರಾಮ ಬಾಬು ಮುಂತಾದವರು ಪಕ್ಕಕ್ಕೆ ಸರಿದರು. ನಾನು ಹೋಗಿ ನೋಡಿದರೆ ಠಾಕೂರರು ಕಾಳೀಮಾತೆಯ ಎದುರುಗಡೆ ನಿಂತುಕೊಂಡು ಭಾವಪರವಶರಾಗಿ ಪ್ರೇಮದಿಂದ ಹಾಡುತ್ತಿದ್ದಾರೆ!" ಕೆಲವು ಸ್ತ್ರೀಭಕ್ತರು ಬಂದಿದ್ದರಿಂದ ಮಾತು ನಿಂತಿತು. ನನಗೂ ಸಹ ಹೊರಡುವ ಸಮಯವಾಯಿತು. ಶ್ರೀಮಾತೆ ಬಟ್ಟೆ ಒಗೆದು ಬಂದು ನನಗೇನೋ ಕೊಡುತ್ತೇನೆ ಎಂದರು.

ಮತ್ತೆ ಮುಕ್ತಿಯ ಸಂಬಂಧವಾಗಿ ಮಾತು ಶುರುವಾಯಿತು. ಶ್ರೀಮಾತೆ ಹೇಳಿದರು, "ಅದು ಹೇಗೆ ಗೊತ್ತೇ, ಮಗುವಿನ ಕೈಯಲ್ಲಿ ಇರುವ ಸಂದೇಶದಂತೆ (ಸಿಹಿತಿಂಡಿ). ಕೆಲವರು ಎಷ್ಟು ಹೇಳಿದರೂ ಮಗು ಅದನ್ನು ಕೊಡುವುದಿಲ್ಲ. ಮನಸ್ಸು ಬಂದರೆ, ಇಷ್ಟವಾದರೆ ಕೇಳದೆಯೇ ಕೊಡುತ್ತದೆ. ಕೆಲವರು ಇಡೀ ಜೀವನ ಕಷ್ಟಪಟ್ಟು ಸಾಧನೆ ಮಾಡಿ ಏನನ್ನೂ ಪಡೆಯಲಿಲ್ಲ. ಮತ್ತೆ ಕೆಲವರು ಏನೂ ಮಾಡದೆ ಕುಳಿತಲ್ಲೇ ಎಲ್ಲಾ ಪಡೆದರು. ಆದ್ದರಿಂದ 'ಭಗವತ್ಕೃಪೆ' ಬಹಳ ದೊಡ್ಡದು." ನಂತರ ಶ್ರೀಮಾತೆ ಬಟ್ಟೆ ಒಗೆಯಲು ಹೋದರು. ಮಧ್ಯಾಹ್ನದ ನೈವೇದ್ಯದ ನಂತರ ಶ್ರೀಮಾತೆ ತಮ್ಮ ಮಾತಿನಂತೆ ಬಿಲ್ವಪತ್ರೆಯನ್ನು ಮಡಿಚಿಕೊಟ್ಟರು. ನಂತರ ಹೇಳಿದರು, 'ಇದನ್ನು (ಕವಚದಂತೆ) ತಾಯತ ಮಾಡಿ ಧರಿಸು. ಇದರ ಬಗ್ಗೆ ಯಾರಿಗೂ ಹೇಳಬೇಡ. ಗೊತ್ತಾದರೆ ಜನ ನನ್ನನ್ನು ಕಿತ್ತುತಿನ್ನುತ್ತಾರೆ."

ಬಾಲಿಗಂಜ್‌ನ ಶ್ರೀಮಾನ್ .....ರು ತಮ್ಮ ಮನೆಗೆ ಬರುವಂತೆ ಕೇಳಿಕೊಂಡರು. ಶ್ರೀಮಾತೆ "ಆಗಲಿ" ಎಂದರು. ಅನಂತರ ಶ್ರೀಮಾತೆ, "ನನಗೆ ಒಂದು ಚಾಪೆ (ಬೆಂಗಾಲಿಯಲ್ಲಿ ಶೀತಲ್‌ಪಾಠಿ ಎನ್ನುತ್ತಾರೆ. ತಾಳೆಗರಿಯಿಂದ ಹೆಣೆದ ಚಾಪೆ. ಬಹಳ ತಣ್ಣಗಿರುತ್ತದೆ) ತಂದುಕೊಡು. ಅದರ ಮೇಲೆ ಮಲಗುತ್ತೇನೆ" ಎಂದರು. "ಇದು ನನ್ನ ಸೌಭಾಗ್ಯ, ಖಂಡಿತವಾಗಿ ತರುತ್ತೇನೆ" ಎಂದು ಹೇಳಿ ನಮಸ್ಕರಿಸಿ ಅವರಿಂದ ಬೀಳ್ಕೊಂಡೆ. ಶ್ರೀಮಾತೆ, "ಮತ್ತೆ ಬಾ" ಎಂದರು.

### ಮೇ ೧೯೧೮

ಇಂದು ಬಾಲಿಗಂಜ್‌ನ ನಮ್ಮ ಮನೆಗೆ ಶ್ರೀಮಾತೆ ಬರುವವರಿದ್ದಾರೆ. ನಿನ್ನೆಯಿಂದಲೇ ಎಲ್ಲಾ ತಯಾರಿ ನಡೆದಿದೆ. ಅವರಿಗಾಗಿ ಹೊಸ ಆಸನ, ಬಿಳಿ ಕಲ್ಲಿನ (ಮಾರ್ಬಲ್) ಪಾತ್ರೆಗಳು (ತಟ್ಟೆ, ಬಟ್ಟಲು ಇತ್ಯಾದಿ) ಎಲ್ಲವನ್ನೂ ತರಲಾಗಿದೆ. ಶ್ರೀಮಾತೆಯ ಬರುವಿಕೆಯ ಸಂಭ್ರಮದಿಂದಾಗಿ ಇಡೀ ರಾತ್ರಿ ನನಗೆ ನಿದ್ದೆ ಬರಲಿಲ್ಲ. ಮಧ್ಯಾಹ್ನ ಬರುವುದಾಗಿ ಹೇಳಿದ್ದರೂ ಸಹ, ಬೆಳಗಿನಿಂದಲೇ ಶ್ರೀ ಶೋಕಹರಣ ಗಾಡಿ ಸಮೇತ ಬಾಗಬಜಾರಿನ ಶ್ರೀಮಾತೆಯ ಮನೆಯಲ್ಲಿ ಉಪಸ್ಥಿತರಿದ್ದರು. ನಾವೂ ಸಹ ಎಲ್ಲ ಕೆಲಸಗಳನ್ನು ಬೇಗ ಬೇಗನೆ ಮುಗಿಸಿ ಸಿದ್ಧರಾದೆವು. ನಾನು ಶ್ರೀಮಾತೆಯವರಿಗೆ ಆಸನವನ್ನು ಹಾಸಿ ಸುತ್ತಲೂ ಹೂವುಗಳನ್ನು ಜೋಡಿಸಿದೆ. ಎಲ್ಲಾ ಕೊಠಡಿಗಳಲ್ಲಿ ಗಂಗಾಜಲವನ್ನು ಚುಮುಕಿಸಿ ಶುಚಿ ಮಾಡಿದೆ. ಶ್ರೀಮಾತೆಯವರಿಗಾಗಿ ಹೂವಿನ ಹಾರವೊಂದನ್ನು ಪೋಣಿಸಿ ಇಟ್ಟೆ. ಎರಡು ಹೂವಿನ ಕುಂಡಗಳನ್ನು ಅಣಿಮಾಡಿ ಆಸನದ ಇಕ್ಕೆಲಗಳಲ್ಲಿಟ್ಟೆ. ಹೊತ್ತಾದಾಗ, ಶ್ರೀಮಾತೆಯವರ ಬರುವಿಕೆಗಾಗಿಯೇ ಕಾಯುತ್ತಿದ್ದೆ. ಕೊನೆಗೂ ಆ ಶುಭಮುಹೂರ್ತ ಬಂತು! ಗಾಡಿಯ ಶಬ್ದ ಕೇಳುತ್ತಲೇ ನಾವೆಲ್ಲರೂ ಕೆಳಗಿಳಿದು ಬಂದೆವು. ಗಾಡಿ ನಿಂತಿತು. ಶ್ರೀಮಾತೆ ಮುಗುಳ್ನಗುತ್ತ, ಸ್ನೇಹದಿಂದ ನಮ್ಮ ಕಡೆ ನೋಡುತ್ತಾ ಇದ್ದಾರೆ. ಅವರು ಇಳಿದ ಕೂಡಲೇ ನಾವೆಲ್ಲರೂ ಅವರಿಗೆ ನಮಸ್ಕರಿಸಿದೆವು.

*(ಮುಂದುವರಿಯುವುದು)*